[Govt. of Karnataka C.R.P. 67]

| Deposition Sheets (RP.No.57) Form No.4 (Civil) | IN THE COURT OF CIVIL JUDGE & J.M.F.C., KARKALA. |
|---|---|

Criminal Case No. 457/2024

..................................................Vs....................................

ಸಾಕ್ಷಿದಾರನ ಹೆಸರು ಃ ಯತೀಶ್ ಕುಮಾರ್ ಪಿ.ಡಬ್ಲ್ಯೂಃ 6

ತಂದೆಯ ಹೆಸರುಃ ದಿಃ ಪುರುಷೊತ್ತಮ ಗಟ್ಟಿ ಸಿ.ಡಬ್ಲ್ಯೂಃ 9

ಪ್ರಾಯ ಃ 53 ವರ್ಷ

ಉದ್ಯೋಗ ಃ ಮುಖ್ಯ ಪೇದೆ, ಸೈಬರ್ ಠಾಣೆ ಉಡುಪಿ

ವಾಸ ಃ ಉಡುಪಿ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 20-02-2026

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು 2023 ಜುಲೈ ನಿಂದ 2024 ಮಾರ್ಚ್ ವರೆಗೆ ಕಾರ್ಕಳ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 28-10-2023 ರಂದು ಸಂಜೆ 8.15 ಗಂಟೆಗೆ ಠಾಣೆಯಲ್ಲಿರುವಾಗ ಚಾಸಾ-1 ರವರು ಠಾಣೆಗೆ ಬಂದ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ, ಠಾಣಾ ಅಕ್ರ ನಂಬರ್ 151/2023 ಕಲಂ 279, 429 ಐ.ಪಿ.ಸಿ. ಅಡಿಯಲ್ಲಿ ಪ್ರ.ವ.ವರದಿಯನ್ನು ದಾಖಲಿಸಿ ಅದರ ಪ್ರತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

ದಿಃ 29-10-2023 ರಂದು ಈ ಪ್ರಕರಣದಲ್ಲಿ ಸ್ವಾಧೀನಪಡಿಸಿಕೊಂಡ ಟಿಪ್ಪರ್ ಲಾರಿಯನ್ನು ಠಾಣಾ ಆವರಣಕ್ಕೆ ತಂದಿರಿಸಿದ್ದು, ಅದನ್ನು ಚಾಸಾ-3 ಮತ್ತು 4 ರವರ ಸಮಕ್ಷಮ ಬೆಳ್ಳಿಗ್ಗೆ 10.00 ಗಂಟೆಯಿಂದ 10.30 ಗಂಟೆವರೆಗೆ ಸೊತ್ತು ಸ್ವಾಧೀನತಾ ಮಹಜರು ಮುಖೇನ ಭಾವಚಿತ್ರಗಳನ್ನು ತೆಗೆದು, ಮುಂದಿನ ಕ್ರಮಕ್ಕಾಗಿ ಸ್ವಾಧೀನಪಡಿಸಿಕೊಂಡಿರುತ್ತೇನೆ. ಸ್ವಾಧೀನಪಡಿಸಿಕೊಂಡ ವಾಹನವನ್ನು ಠಾಣಾ ಸೊತ್ತು ಪಟ್ಟಿ

ಸಂಖ್ಯೆ 186/2023 ರಲ್ಲಿ ನಮೂದಿಸಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಅದೇ ದಿನ ಘಟನಾ ಸ್ಥಳದ ಮಹಜರನ್ನು ತಯಾರಿಸಲು ಚಾಸಾ-3 ಮತ್ತು 4 ರವರಿಗೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ನಂತರ ಘಟನಾ ಸ್ಥಳಕ್ಕೆ ತೆರಳಿದ್ದು, ಅಲ್ಲಿ ಹಾಜರಿದ್ದ ಚಾಸಾ-3 ಮತ್ತು 4 ರವರ ಸಮಕ್ಷಮ ಚಾಸಾ-1 ರವರು ತೋರಿಸಿಕೊಟ್ಟಂತೆ ಮಧ್ಯಾಹ್ನ 1.00 ಗಂಟೆಯಿಂದ 1.45 ರವರೆಗೆ ಘಟನಾ ಸ್ಥಳದ ಮಹಜರು ಹಾಗೂ ನಕಾಶೆ ತಯಾರಿಸಿ, ಸ್ಥಳದಲ್ಲಿ ಭಾವಚಿತ್ರ ತೆಗೆದಿರುತ್ತೇನೆ. ನಂತರ ಸ್ಥಳ ಮಹಜರು ಹಾಗೂ ನಕಾಶೆಗೆ ಪಂಚರ ಸಹಿ ಪಡೆದುಕೊಂಡಿರುತ್ತೇನೆ. ತಕ್ಷೀರಿಗೆ ಸಂಬಂಧಿಸಿದ ಟಿಪ್ಪರ್ ವಾಹನದ ತಾಂತ್ರಿಕ ಪರಿಶೀಲನೆ ನಡೆಸಿ, ವರದಿ ನೀಡುವಂತೆ ಉಡುಪಿ ಆರ್.ಟಿ.ಓ ರವರಿಗೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ಅದೇ ದಿನ ಕೆ.ಎ.20 ಡಿ-4903 ಟಿಪ್ಪರ್ ಲಾರಿ ಮಾಲೀಕರಿಗೆ ಐ.ಎಮ್.ವಿ ಕಲಂ 133 ರಡಿಯಲ್ಲಿ ನೋಟೀಸು ಜಾರಿ ಮಾಡಿ, ಅವರ ಉತ್ತರವನ್ನು ಪಡೆದುಕೊಂಡಿರುತ್ತೇನೆ. ಮರುದಿನ ದಿಃ 30-10-2023 ರಂದು ಸದ್ರಿ ವಾಹನವನ್ನು ಮಾನ್ಯ ನ್ಯಾಯಾಲಯದ ಆದೇಶದಂತೆ ನಷ್ಟ ಭರ್ತಿ ಕರಾರು ಮುಖೇನ ಅದರ ಮಾಲೀಕರಿಗೆ ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಆರೋಪಿಗೆ ಕಲಂ 41(ಎ)(1) ಸಿ.ಆರ್.ಪಿ.ಸಿ ಅಡಿಯಲ್ಲಿ ನೋಟೀಸು ನೀಡಿರುತ್ತೇನೆ. ನಂತರ ದಾಖಲೆಗಳನ್ನು ಪರಿಶೀಲನೆ ನಡೆಸಿದ್ದು, ಟಿಪ್ಪರ್ ಲಾರಿಗೆ ವಾಯು ಮಾಲಿನ್ಯ ದೃಢಪತ್ರ ಇರದ ಕಾರಣ ಅದರ ಮಾಲೀಕರಿಗೆ ಸಿ.ಎಮ್.ವಿ ರೂಲ್ 155 ಜೊತೆ ಕಲಂ 190(2) ಐ.ಎಮ್.ವಿ. ಕಾಯಿದೆ ಅಡಿಯಲ್ಲಿ ನೋಟೀಸು ನೀಡಿರುತ್ತೇನೆ. ನಿಪಿ-2 ಹಾಗೂ ನಿಪಿ-5 ಮಹಜರು ವೇಳೆ ಭಾವಚಿತ್ರಗಳನ್ನು ತೆಗೆದ ಚಾಸಾ-8 ರವರಿಂದ ಕಲಂ 65(ಬಿ) ಭಾರತೀಯ ಸಾಕ್ಷ್ಯ ಕಾಯಿದೆ ಅಡಿಯಲ್ಲಿ ಪ್ರಮಾಣ ಪತ್ರವನ್ನು ಸ್ವೀಕರಿಸಿ, ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿಃ 31-10-2023 ರಂದು ಅಪಘಾತಕೊಳಪಟ್ಟ ಜಾನುವಾರು ಮೃತಪಟ್ಟ ಬಗ್ಗೆ ಚಾಸಾ-1 ರವರು ಮಾಹಿತಿ ನೀಡಿರುತ್ತಾರೆ. ಸದ್ರಿ ಮಾಹಿತಿಯಂತೆ ಮೃತಪಟ್ಟ ಜಾನುವಾರುವಿನ ಮರಣೋತ್ತರ ಪರೀಕ್ಷೆ ನಡೆಸಿ ವರದಿ ನೀಡುವಂತೆ ಚಾಸಾ-5 ರವರಿಗೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ನಂತರ ಅದೇ ದಿನ ಚಾಸಾ-1 ರವರ ಮರುಹೇಳಿಕೆ, ಚಾಸಾ-2 ರಿಂದ ಚಾಸಾ-4 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-10 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ನಿಪಿ-1, ನಿಪಿ-2, ನಿಪಿ-3, ನಿಪಿ-5 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-1(ಬಿ), ನಿಪಿ-2(ಡಿ), ನಿಪಿ-3(ಡಿ), ನಿಪಿ-5(ಡಿ) ಎಂದು ಗುರುತಿಸಲಾಯಿತು, ಸಾಕ್ಷಿಯು ನಿಪಿ-4, ನಿಪಿ-6 ರಿಂದ ನಿಪಿ-8 ರಲ್ಲಿರುವ ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಪ್ರ.ವ.ವರದಿ, ಐ.ಎಮ್.ವಿ. ನೋಟೀಸು, ಅದಕ್ಕೆ ಪಡೆದುಕೊಂಡ ಉತ್ತರ, ನಷ್ಟ ಭರ್ತಿ ಕರಾರು, 65(ಬಿ) ಪ್ರಮಾಣ ಪತ್ರ, ಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-11 ರಿಂದ ನಿಪಿ-15 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-11(ಎ) ಯಿಂದ ನಿಪಿ-15(ಎ) ಎಂದು ಗುರುತಿಸಲಾಯಿತು.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರಃ ಶ್ರೀಮತಿ ಎಸ್.ಆರ್.ಎಸ್. ವಕೀಲರಿಂದಃ

ಚಾಸಾ-1 ರವರಿಗೆ ದೂರು ಬರೆಯಲು ನಮ್ಮ ಠಾಣಾ ಸಿಬ್ಬಂದಿ ಸಹಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರು ಸ್ವ-ಇಚ್ಛೆಯಿಂದ ದೂರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಸ್ಥಳ ಮಹಜರು, ನಕಾಶೆ, ಸೊತ್ತು ಸ್ವಾಧೀನತಾ ಮಹಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2, ನಿಪಿ-3 ಮತ್ತು ನಿಪಿ-5 ನ್ನು ಠಾಣೆಯಲ್ಲಿಯೇ ಕುಳಿತು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಹಾಗೂ ಮರುಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಟಿಪ್ಪರ್ ಲಾರಿ ಮಾಲೀಕರಿಗೆ ಐ.ಎಮ್.ಕಲಂ ಅಡಿಯಲ್ಲಿ ನೋಟೀಸು ನೀಡಿರುವುದಿಲ್ಲ ಹಾಗೂ ಅವರಿಂದ ಯಾವುದೇ ಉತ್ತರವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಟಿಪ್ಪರ್ ಲಾರಿ ಯನ್ನು ಆರ್.ಟಿ.ಓ ರವರು ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸರಿಯಾಗಿ ಆಂಶಿಕ ತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ವಿರುದ್ಧ ಸುಳ್ಳು

ಪಿರ್ಯಾದಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾದುವುಗಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ.ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ